**ದಿಃ 01.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಂ ಬಿ ವಕೀಲರಿಂದಃ

ನಿಡಿ-**1** ರಿಂದ **7** ನ್ನು ಯಾರು ಪಡೆದುಕೊಂಡಿದ್ದು ಎಂದರೆ ಸಾಕ್ಷಿ ವಿಲಿಯಂ ಥಾಮಸ್ ಎಂದು ನುಡಿಯುತ್ತಾರೆ. ಅರ್ಜಿದಾರರಾಗಿ ಅವರ ಹೆಸರು ಇದೆಯಾ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಅರ್ಜಿಯನ್ನು ಯಾವಾಗ ಕೊಟ್ಟಿದ್ದರು ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳು ಯಾವ ವರ್ಷಕ್ಕೆ ಸೇರಿದ್ದು ಎಂದು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಗಳು ಯಾವ ವರ್ಷಕ್ಕೆ ಸೇರಿದ್ದು ಎಂದರೆ ಸಾಕ್ಷಿ **1963-64** ರಿಂದ **1985-86**ರವರೆಗೆ ಇರುವುದಾಗಿ ನುಡಿಯುತ್ತಾರೆ. ನಾನು ಯಾವ ಉದ್ದೇಶಕ್ಕೆ ಸದರಿ ಪಹಣಿ ಪತ್ರಿಕೆಗಳನ್ನು ಹಾಜರುಮಾಡಿದ್ದೇನೆ ಎಂದರೆ ಸಾಕ್ಷಿ ಮಾಲೀಕತ್ವ ತೋರಿಸಲು ಎಂದು ನುಡಿಯುತ್ತಾರೆ. ಅದರ ನಂತರದ ಪಹಣಿಪತ್ರಿಕೆಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಡಿ-**75** ದಾಖಲೆ ಆಗುವಾಗ ನಾನು ಎಷ್ಟನೇ ತರಗತಿ ಓದುತ್ತಿದ್ದೆ ಎಂದರೆ ಸಾಕ್ಷಿ **8** ಎಂದು ನುಡಿಯುತ್ತಾರೆ. ನಿಡಿ-**75**ರ ಕಾಲಕ್ಕೆ ನಾನು ಶಾಲೆಗೆ ರಜೆ ಇದ್ದೇನಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜ ನಿಡಿ-**75**ರ ಕಾಲಕ್ಕೆ ನನ್ನನ್ನು ಯಾವ ಕಾರಣಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿ ದಾಖಲೆಗಳನ್ನು ಓದಿಸಲು ತಾನು ಅವರ ಜೊತೆ ಹೋಗಿದ್ದೆ ಎಂದು ನುಡಿಯುತ್ತಾರೆ. ನನ್ನ ಅಜ್ಜ ಅನಕ್ಷರಸ್ಥರು ಎಂದರೆ ನಿಜ. ನಿಡಿ-**75**ನ್ನು ಹೊರತುಪಡಿಸಿ ಬೇರೆ ಏನು ದಾಖಲೆ ಮಾಡಿದ್ದಾರೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಬೇರೆ ಯಾವ ಕೆಲಸಕ್ಕೆ ಅವರ ಜೊತೆಗೆ ಹೋಗಿದ್ದೆ ಎಂದರೆ ಸಾಕ್ಷಿ ಮಜೂರಿ ಲೆಕ್ಕ ಓದಿ ಹೇಳಲು ಎಂದು ನುಡಿಯುತ್ತಾರೆ. ನನ್ನ ಅಜ್ಜ ನಿಡಿ-**75** ಮಾಡಿಕೊಳ್ಳುವ ಮೊದಲು ಹೇಳಿದ್ದರಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ.

ನಿಡಿ-**75**ರ ಬರವಣಿಗೆ ಆಗುವ ಎಷ್ಟು ಗಂಟೆಗೆ ನಾನು ಹಾಜರಿದ್ದೆ ಎಂದರೆ ಸಾಕ್ಷಿ ಸಮಯ ನೆನಪಿಲ್ಲ ಆದರೆ ಬೆಳಗಿನ ಜಾವ ಎಂದು ನುಡಿಯುತ್ತಾರೆ. ನಾನು ಎಷ್ಟು ಕಾಲ ಅಲ್ಲಿ ಇದ್ದೆ ಎಂದರೆ ಸಾಕ್ಷಿ ದಾಖಲೆ ಆಗುವವರೆಗೂ ಇದ್ದು ಸಮಯ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಜೊತೆ ಬೇರೆ ಯಾರು ಇದ್ದರು ಎಂದರೆ ಸಾಕ್ಷಿ ನಾರಾಯಣ ರಾವ್ ಹಾಗೂ ಅವರ ಮಕ್ಕಳು, ತಾನು, ತನ್ನ ಅಜ್ಜ, ಇಬ್ಬರು ಸಾಕ್ಷಿದಾರರು ಎಂದು ನುಡಿಯುತ್ತಾರೆ. ಸಾಕ್ಷಿದಾರರನ್ನು ನಾನು ಕರೆದುಕೊಂಡು ಬಂದೆನಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿದಾರರು ಅವರಾಗೇ ಬಂದಿದ್ದಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಡಿ-**75**ನ್ನು ಬರೆಯಲು ಏನೇನು ದಾಖಲೆ ಕೊಟ್ಟಿದ್ದರು ಎಂದರೆ ನನಗೆ ನೆನಪಿಲ್ಲ. ಬರವಣಿಗೆಯಲ್ಲಿ ಆಸ್ತಿಯ ಸರ್ವೆ ನಂಬರ್ ನಮೂದಿಸಿದ್ದರಾ ಎಂದರೆ ಸಾಕ್ಷಿ ಸರ್ವೆ ನಂಬರ್ ಬಗ್ಗೆ ನೆನಪಿಲ್ಲ, ಪಟ್ಟಾ ನಂಬರ್ ಬರೆದಿರುವುದು ನೆನಪಿದೆ ಎಂದು ನುಡಿಯುತ್ತಾರೆ. ನಿಡಿ-**75** ಬರೆಯಲು

ಯಾರು ಮಾಹಿತಿ ನೀಡಿರುವುದು ಎಂದರೆ ಸಾಕ್ಷಿ ಅಜ್ಜ ಎಂದು ನುಡಿಯುತ್ತಾರೆ. ಬರವಣಿಗೆ ಆದ ನಂತರ ಏನು ಹೇಳಿದ್ದರು ಎಂದರೆ ಸಾಕ್ಷಿ ದಾಖಲೆ ಓದಿ ಹೇಳಿರುವುದಾಗಿ ನುಡಿಯುತ್ತಾರೆ.

ಕಾಮಿಲ್ ಡಿಸಿಲ್ವಾ ಎನ್ನುವ ಸಹಿ ಎಷ್ಟು ಪುಟಗಳಲ್ಲಿ ಮಾಡಿದ್ದಾರೆ ಎಂದರೆ ಸಾಕ್ಷಿ ಪುಟಗಳಲ್ಲಿ ಗೊತ್ತಿಲ್ಲ, ಎರಡು ಕಡೆ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ಎರಡು ಕಡೆ ಯಾವುದು ಎಂದರೆ ಸಾಕ್ಷಿ ಎರಡು ಪುಟಗಳಲ್ಲಿ ಇರುವುದಾಗಿ ತೋರಿಸುತ್ತಾರೆ. ಕಾಮಿಲ್ ಡಿಸಿಲ್ವಾ ಅವರ ಸಹಿಯನ್ನು ಏನೆಂದು ಹಾಕುತ್ತಿದ್ದರು ಎಂದರೆ ಸಾಕ್ಷಿ ಕಾಮಿಲಾ ಸಿಲ್ವಾ ಎಂದು ಬರೆಯುತ್ತಿದ್ದರು. ನನ್ನ ಅಜ್ಜ ಅನಕ್ಷರಸ್ಥರಾದ ಕಾರಣ ಸಹಿ ಮಾಡುತ್ತಿರಲಿಲ್ಲ, ಹೆಬ್ಬೆಟ್ಟು ಹಾಕುತ್ತಿದ್ದರು ಎಂದರೆ ಸುಳ್ಳು. ಅವರ ನಂತರ ಯಾರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ಇಬ್ಬರು ಸಾಕ್ಷಿಗಳು, ಬರಹಗಾರರು ಅವರ ಕಚೇರಿಯಲ್ಲಿ ಸಹಿ ಮಾಡಿರುವುದಾಗಿ ನುಡಿಯುತ್ತಾರೆ.

ಕಾಮಿಲ್ ಡಿಸಿಲ್ವಾ ಇವರಿಗೆ ಸೇರಿದ ಇತರ ಆಸ್ತಿಗಳ ಕುರಿತು ನಿಡಿ-75ರಲ್ಲಿ ಏನಾದರೂ ವ್ಯವಸ್ಥೆ ಮಾಡಿದ್ದಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಲ್ಲಾ ಬರವಣಿಗೆ ಎಷ್ಟು ಹೊತ್ತಿನವರೆಗೆ ಆಗಿದೆ ಎಂದರೆ ಸಾಕ್ಷಿ ಇಡೀ ದಿನ ಆಗಿದೆ ಎಂದು ನುಡಿಯುತ್ತಾರೆ. ನಿಡಿ-75 ದಾಖಲೆಯನ್ನು ಬರವಣಿಗೆದಾರರು ಎಲ್ಲಾ ಬರವಣಿಗೆ ಆದ ನಂತರ ನನ್ನ ಅಜ್ಜ ಅಥವಾ ನನ್ನ ಕೈಗೆ ನೀಡಿದ್ದಾರಾ ಎಂದರೆ ಸಾಕ್ಷಿ ನೋಂದಣಿ ಕಚೇರಿಗೆ ಕರೆದುಕೊಂಡು ಹೋಗಿರುವುದಾಗಿ ನುಡಿಯುತ್ತಾರೆ. ನಾನು ಅಥವಾ ನನ್ನ ಅಜ್ಜ ನೋಂದಣಿ ಕಚೇರಿಗೆ ಹೋಗಿಲ್ಲ ಎಂದರೆ ಸುಳ್ಳು. ನಾನು ನಿಡಿ-75 ಆಗಿದೆ ಎಂದು ಹೇಳುವಾಗ ಹಾಜರಿರಲಿಲ್ಲ ಹಾಗೂ ನಿಡಿ-75 ಸುಳ್ಳು ದಾಖಲೆ ಎಂದರೆ ಸುಳ್ಳು.

ನನ್ನ ಅಜ್ಜ ಸಾಯುವ ಎರಡು ವರ್ಷ ಪೂರ್ವದಿಂದಲೂ ಅನಾರೋಗ್ಯ ಪೀಡಿತರಾಗಿ ಹಾಸಿಗೆಯಲ್ಲೇ ಇದ್ದ ಕಾರಣ ಅವರು ಓಡಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸುಳ್ಳು. ಅದೇ ರೀತಿ ಅವರ ಮಾನಸಿಕ ಆರೋಗ್ಯ ಸಹ ಸರಿ ಇರಲಿಲ್ಲ ಎಂದರೆ ಸುಳ್ಳು. ನಿಡಿ-75ರ ಸಾಕ್ಷಿದಾರರು ಪ್ರತಿವಾದಿ 6ರವರ ಹೇಳಿಕೆಯ ಮೇರೆಗೆ ಸಹಿ ಮಾಡಿದಂತಹ ಸಾಕ್ಷಿದಾರರು ಎಂದರೆ ಸುಳ್ಳು.

ನಾನು ನಿಡಿ-75ರ ಕುರಿತು ಸಾಕ್ಷಿ ಹೇಳಲು 6ನೇ ಪ್ರತಿವಾದಿಯೇ ಕಾರಣ ಎಂದರೆ ಸುಳ್ಳು. ನಾನು ಪಾಲಿನ ವ್ಯಾಜ್ಯದ ಕುರಿತು ಈ ಹಿಂದೆ 6ನೇ ಪ್ರತಿವಾದಿ ಪರ ಹಾಗೂ ನನ್ನ ತಂದೆಯ ವಿರುದ್ಧ ಸಾಕ್ಷಿ ಹೇಳಿದ್ದೇನೆ ಎಂದರೆ ಸಾಕ್ಷಿ ತಾನು ಇರುವುದನ್ನು ಹೇಳಿರುವುದಾಗಿ ನುಡಿಯುತ್ತಾರೆ.

ನನ್ನ ತಂದೆ ನನ್ನ ಬಾಲ್ಯ ಕಾಲದಲ್ಲಿ ಒಟ್ಟಿಗೆ ಇದ್ದಾಗ ಆರ್ಥಿಕವಾಗಿ ಕಷ್ಟದಲ್ಲಿ ಇದ್ದರು ಎಂದರೆ ಸಾಕ್ಷಿ ಅವರ ಬಡತನದ ಬಗ್ಗೆ ತನಗೆ ಗೊತ್ತಿಲ್ಲ. ಆದರೆ ತಮಗೆ ಯಾವುದೇ ಕೊರತೆ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಡಿ-75ರ ಆಸ್ತಿಯ ಉಸ್ತುವಾರಿಯನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ನಿಡಿ-75 6ನೇ ಪ್ರತಿವಾದಿಗೆ ಯಾವ ರೀತಿ ಬಂತು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ: 161/1999ರಲ್ಲಿ ನಿಡಿ-75ರ ಬಗ್ಗೆ ವಾದಿ ಏನು ಮಾಹಿತಿ ನೀಡಿದ್ದಾರೆ ಎಂದರೆ ಸಾಕ್ಷಿ ಅದಕ್ಕೂ

ಇದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆಯಾ ಎಂದರೆ ಸಾಕ್ಷಿ ನಾನು ಸಾಕ್ಷಿಯಾದ ಕಾರಣ ಅಷ್ಟು ಮಾತ್ರ ಗೊತ್ತಿರುವುದಾಗಿ ನುಡಿಯುತ್ತಾರೆ.

ಜೆಬಿ ಡಿಸಿಲ್ವಾ ನನ್ನ ಚಿಕ್ಕಪ್ಪ. ಸದರಿಯವರು ಧರ್ಮಗುರುಗಳು ಆಗಿದ್ದರು ಎಂದರೆ ನಿಜ. ಸದರಿಯವರು ಎಲ್ಲಿ ಧರ್ಮಗುರುಗಳು ಆಗಿದ್ದರು ಎಂದರೆ ಸಾಕ್ಷಿ ಬೆಳಗಾಂ ಪ್ರಾಂತ್ಯದಲ್ಲಿ ಎಂದು ನುಡಿಯುತ್ತಾರೆ. ಸದರಿಯವರು ಸಾಯುವವರೆಗೂ ಅಲ್ಲಿಯೇ ಇದ್ದರಾ ಎಂದರೆ ಸಾಕ್ಷಿ ಅದೇ ಪ್ರಾಂತ್ಯದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಐಟಂ ನಂಬರ್ 7 ಮತ್ತು 8 ಯಾವ ವರ್ಷ ಕ್ರಯಚೀಟಿ ಆಗಿರುವುದು ಎಂದರೆ ಸಾಕ್ಷಿ 1977 ಎಂದು ನುಡಿಯುತ್ತಾರೆ.

ಕಾಮಿಲ್ ಡಿಸಿಲ್ವಾ ಯಾವಾಗ ಮೃತಪಟ್ಟರು ಎಂದರೆ ಸಾಕ್ಷಿ 28.12.1976ರಲ್ಲಿ ಎಂದು ನುಡಿಯುತ್ತಾರೆ. ಆ ಅವಧಿ ನನ್ನ ಅಜ್ಜ ತೀರಿಹೋದ ಎಷ್ಟು ಅವಧಿ ಎಂದರೆ ಸಾಕ್ಷಿ 6 ತಿಂಗಳು ಇರಬಹುದು ಎಂದು ನುಡಿಯುತ್ತಾರೆ.ಸದರಿ ಕ್ರಯಪತ್ರ ಮಾಡಲು ಸಂಪೂರ್ಣ ಹಣ ನನ್ನ ಅಜ್ಜ ಪಾವತಿ ಮಾಡಿದ್ದು ಅವರು ಮೃತಪಟ್ಟ ಕಾರಣ ಕ್ರಯಪತ್ರ ಜೆಬಿ ಡಿಸಿಲ್ವಾ ಇವರ ಹೆಸರಿಗೆ ಆಗಿದೆ ಎಂದರೆ ಸುಳ್ಳು.

ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಗಿರುತ್ತದೆ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**